ಭಾವಿಸಿರಬೇಕು.

"ಬನ್ನಿ ನನ್ನ ಜೊತೆಗೆ'' ಇಷ್ಟು ಹೇಳಿ ಆತ ನನ್ನನ್ನು ಅವನ ಛೇಂಬರಿಗೆ ಕರೆದೊಯ್ದು, ಛೇಂಬರಿನ ಬಾಗಿಲನ್ನು ಭದ್ರವಾಗಿ ಹಾಕಿದ.

"ಈಗ, ಇಲ್ಲಿ ಯಾವುದೇ ಅಡಚಣೆ ಇಲ್ಲದೆ ಆರಾಮವಾಗಿ ಕುಳಿತು ಮಾತನಾಡಬಹುದು" ಎಂದ. ಮ್ಯಾನೇಜರ್‌ಗೆ ನನ್ನ ವಿಷಯದಲ್ಲಿ ಆತಂಕ ತುಂಬಿದ ಕುತೂಹಲ ಇದ್ದಂತೆ ಅನಿಸಿತು.

"ಇದೇನಿದು ನಿಂತೇ ಇದ್ದಿರ? ಕುಳಿತುಕೊಳ್ಳಿ.''

ನಾವಿಬ್ಬರೂ ಕುರ್ಚಿಗಳಲ್ಲಿ ಎದುರುಬದುರಾಗಿ ಕುಳಿತು ಒಂದು ಕ್ಷಣ ಒಬ್ಬರನ್ನೊಬ್ಬರು ದಿಟ್ಟಿಸಿದೆವು. ನನಗೆ ಏನು ಮಾತನಾಡಬೇಕು ಎನ್ನುವುದೇ ತಿಳಿಯಲಿಲ್ಲ.

"ನನ್ನ ಊಹೆ ಸರಿಯಾಗಿದ್ದರೆ ನೀವು ಸಿಬಿಐ ಅಧಿಕಾರಿಗಳೆ ಇರಬೇಕು ಅಲ್ಲವೇ?'' ಮ್ಯಾನೇಜರ್ ಅತ್ಯಂತ ತಗ್ಗಿದ ದನಿಯಲ್ಲಿ ಪ್ರಶ್ನಿಸಿದ.

ಬಹುಶಃ ನನ್ನ ನಿಗೂಢವಾದ ವರ್ತನೆ ಅವನಲ್ಲಿ ಈ ಸಂಶಯವನ್ನು ಹುಟ್ಟು ಹಾಕಿತ್ತೆಂದು ಅನ್ನಿಸುತ್ತದೆ ಮತ್ತು ಅವನಿಗೆ ಹೀಗೆ ಅನ್ನಿಸುತ್ತಿದೆ ಎನ್ನುವ ಯೋಚನೆಯೆ ನನ್ನನ್ನು ಇನ್ನೂ ಅಸ್ವಸ್ಥನನ್ನಾಗಿ ಮಾಡಿತ್ತು.

"ಅಲ್ಲ ನಾನು ಸಿಬಿಐನಿಂದ ಬಂದವನಲ್ಲ," ನನಗೆ ಗೊತ್ತಿಲ್ಲದಂತೆ ನನ್ನ ದನಿ ಅದೆಷ್ಟು ಹರಿತವಾಗಿತ್ತೆಂದರೆ, ನಾನು ಸಿಬಿಐಗಿಂತ ಮೇಲಿನ ತನಿಖಾ ಸಂಸ್ಥೆಯೊಂದರಿಂದ ಬಂದ ಅಧಿಕಾರಿ ಎಂದು ಸೂಚಿಸುವಂತಿತ್ತು.

"ನಿಜ ಹೇಳಬೇಕೆಂದರೆ,'' ನಾನು ಗಂಟಲನ್ನು ಸರಿ ಪಡಿಸಿಕೊಳ್ಳುತ್ತ ಹೇಳಿದೆ, "ನಾನು ತನಿಖಾಧಿಕಾರಿಯೇ ಅಲ್ಲ. ನಾನು ಬಂದಿದ್ದು ಒಂದು ಅಕೌಂಟ್ ತೆರೆಯಲಿಕ್ಕೆ. ನನ್ನ ಬಳಿ ಇರುವ ಒಂದಷ್ಟು ಹಣವನ್ನು ಬ್ಯಾಂಕಿನಲ್ಲಿ ಇಡಬೇಕಿತ್ತು."

ಈ ಮಾತು ಕೇಳಿದ್ದೆ ಮ್ಯಾನೇಜರ್‌ಗೆ ಅಪಾರ ಸಮಾಧಾನವಾದ ಹಾಗೆ ತೋರಿತು. ಆದರೂ ಅವನ ಅನುಮಾನ ಪೂರ್ತಿಯಾಗಿ ಪರಿಹಾರವಾದ ಹಾಗೆ ಕಾಣಿಸಲಿಲ್ಲ. ಸಿಬಿಐ ಅಧಿಕಾರಿಯಿಂದ ನಾನು ಯಾವುದೋ ಬಿಸಿನೆಸ್ ಮಾಡುವ ಶ್ರೀಮಂತ ಮನುಷ್ಯ ಎನ್ನುವ ತೀರ್ಮಾನಕ್ಕೆ ಆತ ಬಂದ ಹಾಗೆ ಇತ್ತು.

"ದೊಡ್ಡ ಮೊತ್ತವೇ ಅನಿಸುತ್ತೆ" ಆತ ಸ್ವಲ್ಪ ಮುಂದಕ್ಕೆ ಬಾಗಿ ಕೇಳಿದ.

"ಹ್ಬೃ, ಸ್ವಲ್ಪ ದೊಡ್ಡ ಮೊತ್ತವೆ" ನಾನು ಉಸುರಿದೆ. "ಸುಮಾರು ಎಂಟು ನೂರಾ ಐವತ್ತು ರೂಪಾಯಿಗಳನ್ನ ಜಮಾ ಮಾಡಲು ಬಯಸುತ್ತೇನೆ. ಆಮೇಲೆ ಪ್ರತಿ ತಿಂಗಳೂ ಇನ್ನೂರು ರೂಪಾಯಿಗಳನ್ನ ಜಮಾ ಮಾಡುತ್ತೇನೆ."

ಇದನ್ನ ಕೇಳಿದ್ದೆ ಮ್ಯಾನೇಜರ್ ದಡಕ್ಕನೆ ಕುರ್ಚಿಯಿಂದ ಎದ್ದು, ಛೇಂಬರಿನ ಬಾಗಿಲನ್ನು ತೆಗೆದು, ನಾನು ಈ ಮೊದಲೇ ಭೇಟಿಯಾಗಿದ್ದ ಅಕೌಂಟಂಟ್‌ನನ್ನು ಕೂಗಿ ಕರೆದ.

"ಮಂಜುನಾಥ್,'' ಮ್ಯಾನೇಜರ್ ಧ್ವನಿ ಅಗತ್ಯಕ್ಕಿಂತ ಸ್ವಲ್ಪ ಹೆಚ್ಚೇ ದೊಡ್ಡದಾಗಿದೆಯೇನೋ ಅನಿಸಿತು. "ಇಲ್ಲಿದ್ದಾರಲ್ಲ ಇವರು ಒಂದು ಹೊಸ ಅಕೌಂಟ್ ತೆಗೆದು ಎಂಟು ನೂರ ಐವತ್ತು ರೂಪಾಯಿಗಳನ್ನು ಜಮಾ ಮಾಡಲು ಬಯಸುತ್ತಾರೆ."

ನಂತರ ಮ್ಯಾನೇಜರ್ ನನಗೆ ಬಾಗಿಲಿನ ಕಡೆ ಕೈ ತೋರಿಸಿ, "ದಯವಿಟ್ಟು ಹೊರ ನಡೆಯಿರಿ" ಎಂದ.

"ನಮಸ್ಕಾರ" ಎಂದು ನಾನು ಅಕೌಂಟಂಟ್‌ನ ಹಿಂಬಾಲಿಸಿದೆ. ನಂತರ ಅಕೌಂಟಂಟ್‌ನ